

ಜಿ.ಎಸ್. ಶಿವರುದ್ರಪ್ಪ ಅವರೊಂದಿಗೆ ಚೆನ್ನವೀರ ಕಣವಿ

(ಶಬ್ದದೊಳಗಣ ನಿಶ್ಶಬ್ದ, ಪುಟ 59). ಈ ಎಚ್ಚರದಲ್ಲಿಯೇ ಕಣವಿಯವರ ಸೃಜನಶೀಲತೆ ಕ್ರಿಯಾಶೀಲವಾಗಿತ್ತು.

1949ರಲ್ಲಿ ಕಣವಿಯವರ ಮೊದಲ ಸಂಕಲನ 'ಕಾವ್ಯಾಕ್ಷಿ' ಪ್ರಕಟವಾಯಿತು. ಅದಕ್ಕೆ ಮುನ್ನುಡಿ ಬರೆದಿರುವ ದ.ರಾ. ಬೇಂದ್ರೆಯವರು ಹೇಳುತ್ತಾರೆ: 'ಕಣವಿಯವರ ಕವಿತೆಗಳಲ್ಲಿ ಜೀವಂತ ಗತಿಯಿದೆ, ಮಾತಿಗೆ ಅಚ್ಚುಕಟ್ಟು ಇದೆ. ಅಲ್ಪ ಸಂತುಷ್ಟಿಯಿಲ್ಲ, ಮಹತ್ತಿನ ಕಡೆಗೆ ಸೆಳೆತವಿದೆ. ಅವರ ಬೆಳೆವ ಮನಸ್ಸೂ, ಅಂತಃಕರಣವೂ ವಿಕೃತ ಕ್ಷೋಭದಿಂದ ಮುದುಡಿಕೊಂಡಿಲ್ಲ; ವಿಪರೀತ ವಿಚಾರಗಳಿಂದ ಹರಿತವಾಗಿಲ್ಲ'. ಕಣವಿಯವರ ಸಮಗ್ರ ಕಾವ್ಯದ ಸ್ವರೂಪವನ್ನು ಬೇಂದ್ರೆಯವರು ಆರಂಭದಲ್ಲಿಯೇ ಗುರ್ತಿಸಿದಂತೆ ತೋರುತ್ತದೆ. ಕಣವಿಯವರ ಮೊದಲ ಸಂಕಲನ ಪ್ರಕಟವಾದ ಕಾಲ ಕನ್ನಡದಲ್ಲಿ 'ನವ್ಯ' ಮಾರ್ಗ ತಲೆದೋರುತ್ತಿದ್ದ ಸಂದರ್ಭ. ಬೇಂದ್ರೆಯವರ ಮಾತುಗಳಿಗೆ ಆ ಹಿನ್ನೆಲೆಯಿರುವಂತೆ ತೋರುತ್ತಿದೆ. ಕಣವಿಯವರು ತಮ್ಮ ಕಾವ್ಯಪಯಣದಲ್ಲಿ ಕನ್ನಡ ಕಾವ್ಯದಲ್ಲಾದ ಬದಲಾವಣೆಯ ಘಟ್ಟಗಳನ್ನು ಹಾದು ಬಂದಿದ್ದಾರೆ; ಎಲ್ಲ ಪಲ್ಲಟಗಳಿಗೂ ತಮ್ಮದೇ ನೆಲೆಯಲ್ಲಿ ನಿಂತು ಸ್ಪಂದಿಸಿದ್ದಾರೆ. ಆದರೆ, ಯಾವ ಬಗೆಯ ಸಿದ್ಧಾಂತಗಳಿಗೂ ಕಟ್ಟುಬೀಳದೆ ಜೀವನಾನುಭವವನ್ನೇ ಮೂಲದ್ರವ್ಯವನ್ನಾಗಿ ಮಾಡಿಕೊಂಡು ಜೀವನಪ್ರೀತಿ ಹಾಗೂ ಇತ್ಯಾತ್ಮಕ ಮನೋಭಾವವನ್ನು ಜತನವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಎಲ್ಲ ಬಗೆಯ ಆಕ್ರಮಣಗಳ ನಡುವೆಯೂ ಅಂತಃಕರಣದ 'ಜೀವಧ್ವನಿ' ಕಳೆದುಹೋಗಲು ಬಿಡದೆ, ಗದ್ದಲ ಗೊಂದಲಗಳ ನಡುವೆಯೂ ಸಮಚಿತ್ತವನ್ನು ಉಳಿಸಿಕೊಂಡು, ಎಲ್ಲ ಬಗೆಯ ಅನುಭವವಲಯಗಳಿಗೂ ಮುಕ್ತವಾಗಿ ತೆರೆದುಕೊಂಡು ಕಾವ್ಯ ರಚಿಸುತ್ತ ಬಂದದ್ದು ಕಣವಿಯವರ ಪ್ರತಿಭೆಯ ವಿಶಿಷ್ಟತೆ. ಈ ಮನೋಭಾವವನ್ನು ಕೆಲವರು 'ಸಮನ್ವಯ' ಎಂದು ಕರೆದದ್ದುಂಟು. ಹಾಗೆ ನೋಡಿದರೆ, ಕಣವಿಯವರ ಪ್ರತಿಭೆ 'ಸಮನ್ವಯ ಸ್ವರೂಪ'ದ್ದಲ್ಲ; ಬದಲಾಗಿ 'ಸಮಾಹಿತ ಸ್ವರೂಪ'ದ್ದು. (ಕಣವಿಯವರ ಒಂದು ಕೃತಿಯ ಹೆಸರು 'ಸಮಾಹಿತ'). ಎಲ್ಲಕ್ಕೂ